ಹೋಗಿ ಚಾಲೆಂಜ್ ಮಾಡಿದರು. ಆಗ ಅದು quash ಆಯಿತು. ಅದು ದುರ್ದೈವದ ಸಂಗತಿ. ಯಾರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಚುನಾಯಿತರಾಗುತ್ತಾರೆ. ಅವರ ಮನೆಯಲ್ಲಿಯೇ ಶೌಚಾಲಯವಿಲ್ಲವೆಂದರೆ ಅವರು ಬೇರೆಯವರಿಗೆ ಏನು ಹೇಳುವುದಕ್ಕೆ ಆಗುತ್ತದೆ? ಇದನ್ನು ಮತ್ತೊಮ್ಮೆ ಕಡ್ಡಾಯ ಮಾಡಬೇಕು. ಏಕೆಂದರೆ, ಗ್ರಾಮ ಪಂಚಾಯಿತಿ ಸದಸ್ಯರು 91 ಸಾವಿರ ಜನ ಇದ್ದಾರೆ. 91 ಸಾವಿರ ಜನ ಗ್ರಾಮ ಪಂಚಾಯಿತಿ ಸದಸ್ಯರ ಮನೆಗಳಲ್ಲಿ ಶೌಚಾಲಯಗಳನ್ನು ಕಟ್ಟಿದ್ದರೆ ಎಷ್ಟೋ ಬದಲಾವಣೆ ಆಗುತ್ತದೆ. ಆ ದೃಷ್ಟಿಯಿಂದ ನಾವು ವಿಚಾರ ಮಾಡಬಹುದು. ಅದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ. ಮಾನ್ಯ ಎಲ್ಲಾ ಶಾಸಕರುಗಳು ಏನು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಇದು ಸಾಮಾಜಿಕ ಕಳಕಳಿಯಾದ್ದರಿಂದ ಇದರ ಬಗ್ಗೆ ಸರ್ಕಾರ ಎಲ್ಲಾ ರೀತಿಯಾದ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಬಯಸುತ್ತೇನೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 10–03–2010ರ ಮೂರನೇ ಪಟ್ಟಿಯಲ್ಲಿರುವ 114 ಪ್ರಶ್ನೆಗಳ ಪೈಕಿ 85 ಸಂಖ್ಯೆಯ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ – I)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

(i) ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಹೆಸರಿನ ಮುಂದಿರುವ ಭಾರತ ಸಂವಿಧಾನದ 151(2) ನೇ ಅನುಚ್ಛೇದದ ಮೇರೆಗೆ 2008–09ನೇ ಸಾಲಿನ ಹಣಕಾಸು ಲೆಕ್ಕ ಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ii) ಶ್ರೀ ಎಸ್. ಬಿ.ಪಾಟೀಲ್ (ಕಾರ್ಯದರ್ಶಿ) : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರ್ಯಾಲೋಚನೆಗಾಗಿ ಬಂದಿರುವ "ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009" ನ್ನು ಈಗ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು (ಅನುಬಂಧ – II)

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಬಿಜಾಪುರದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. (ಗೊಂದಲ) ಬಿಜಾಪುರದಲ್ಲಿ ಸತತವಾಗಿ ಸತ್ಯಾಗ್ರಹ ನಡೆಯುತ್ತಿದೆ. ಅದಕ್ಕೆ ತಾವು ಒಪ್ಪಿಗೆ ನೀಡಿದರೆ ನಾಳೆ ದಿವಸ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಲಿಖಿತ ಉತ್ತರಗಳು ಸಿಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಮ್ಮೆ ಹೇಳಿದರೆ ಹೇಗೆ?

ಶ್ರೀ ವೆಂಕಟರಾವ್ ನಾಡಗೌಡ : ನಿನ್ನೆ 70 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಇವತ್ತಿನವರೆಗೂ ಲಿಖಿತ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರಗಳಿಲ್ಲ. ಪ್ರಶ್ನೆ ಏಕೆ ಕೇಳಬೇಕು? ಉತ್ತರ ಏಕೆ ಕೊಡುವುದಿಲ್ಲ? ನಿನ್ನೆ 70–80 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು : ಇಲಾಖೆಗಳಿಂದ ಉತ್ತರ ಬಂದ ನಂತರ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೇವೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಪ್ರಶ್ನೆ ಕೇಳುವುದರಲ್ಲಿ ಅರ್ಥವೇ ಇಲ್ಲದ ಹಾಗೆ ಆಗಿದೆ. ಉತ್ತರ ಕೊಡದೇ ತಪ್ಪಿಸಿಕೊಂಡರೆ ಪ್ರಶ್ನೆ ಏಕೆ ಕೇಳಬೇಕು?

(ಗೊಂದಲ)

ಅಧ್ಯಕ್ಷರು : ಮಾನ್ಯ ನರೇಂದ್ರ ಬಾಬುರವರು ನಿಲುವಳಿ ಸೂಚನೆ ತೆಗೆದುಕೊಳ್ಳುತ್ತಾರೆ. ನಿಲುವಳಿ ಸೂಚನೆಯನ್ನು ಅವರು ತಂದಿದ್ದಾರೆ. ದಯವಿಟ್ಟು ನೀವುಗಳು ಕುಳಿತುಕೊಳ್ಳಿ. ನಿಲುವಳಿ ಸೂಚನೆಗೆ ಕರೆದಿದ್ದೇನೆ. ಒಂದು ನಿಮಿಷ ನೀವುಗಳು ಕುಳಿತುಕೊಳ್ಳಿ. ಆಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ಕರ್ನಾಟಕ ಗೃಹ ಮಂಡಳಿಯ ಕಾರ್ಯ ವೈಖರಿ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ) : ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಸರ್ಕಾರದ ಮುಂದೆ ನಾನು ಈಗಾಗಲೇ ಮಂಡಿಸಿದ್ದೇನೆ. ಕರ್ನಾಟಕ ಗೃಹ ಮಂಡಳಿಯಲ್ಲಿ ಹಲವಾರು ವರ್ಷಗಳಿಂದ ಕಟ್ಟಿರುವ ಕೊಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನಗಳು ಮತ್ತು ಮನೆಗಳಿವೆ. 1962 ರಲ್ಲಿ ಆರಂಭಗೊಂಡಿರುವ ಹೌಸಿಂಗ್ ಬೋರ್ಡ್ ಇಂದು ಸಂಪೂರ್ಣ ನಿಷ್ಕ್ರೀಯವಾಗಿದೆ. ಈ ಹಿಂದೆ ತಿಪ್ಪೇಗೌಡರು ಎಂಬ ಸಚಿವರಿದ್ದರು. ಬಹುಶಃ, ನನಗೆ ನೆನಪಿರುವಂತೆ ಸದಾಶಿವನಗರದಿಂದಿಡಿದು ಗ್ರಾಮಾಂತರ ಪ್ರದೇಶದವರೆಗೂ ಮನೆಗಳನ್ನು ಹೌಸಿಂಗ್ ಬೋರ್ಡ್ ನಿರ್ಮಿಸಿತ್ತು. ಆದರೆ, ಇವತ್ತು ಹೌಸಿಂಗ್ ಬೋರ್ಡ್ ಎನ್ನುವುದು ಯಾವುದೋ construction corporation ತರಹ ಕೆಲಸ ಮಾಡುತ್ತಿದೆ, Land Army Corporation ತರಹ ಕಾರ್ಯ ನಿರ್ವಹಿಸುತ್ತಿದೆಯೇ ಹೊರತು ನಿಜವಾಗಿಯೂ ಹೌಸಿಂಗ್ ಬೋರ್ಡ್ ಏನು ಮಾಡಬೇಕಾಗಿತ್ತು ಎಂದರೆ, ಎಲ್ಲರಿಗೂ ನೀರು ಮತ್ತು ಸೂರು ಎಂದು ಏನು ಹೇಳುತ್ತೇವೆ, ಅದನ್ನು ಕೊಡಬಹುದಾಗಿತ್ತು. ಆದರೆ, ಅದರಲ್ಲಿ ಸಂಪೂರ್ಣ ವಿಫಲವಾಗಿರುವುದು ನೋವು ತರುವ ಸಂಗತಿಯಾಗಿದೆ.

ಅಧ್ಯಕ್ಷರು : ಈ ವಿಷಯ ನಿಲುವಳಿ ಸೂಚನೆಯಡಿ ಹೇಗೆ ಬರುತ್ತದೆಂಬುದನ್ನು ಹೇಳಬೇಕು.

ಶ್ರೀ ನೆ.ಲ.ನರೇಂದ್ರಬಾಬು : ಇವತ್ತು ಗೃಹ ಮಂಡಳಿ ರಚನೆಯಾಗಿರುವ ಉದ್ದೇಶ ಈಡೇರುತ್ತಿಲ್ಲ. ವಸತಿಹೀನರಿಗೆ ವಸತಿ ಕೊಡುವುದಕ್ಕಾಗುತ್ತಿಲ್ಲ, ನಿವೇಶನ ಇಲ್ಲದವರಿಗೆ ನಿವೇಶನ ಕೊಡುವ ಕೆಲಸವಾಗುತ್ತಿಲ್ಲ.